**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ.**

**ಸಿಸಿ ನಂಬರ 557/2023**

ಆರೋಪಿಯ ಹೆಸರುಃ 1) ರವಿ

ತಂದೆಯ ಹೆಸರುಃ ದಯಾನಂದ ನಾಯ್ಕ

ವಯಸ್ಸುಃ 38 ವರ್ಷ

ಉದ್ಯೋಗಃ ಪಿಗ್ಮಿಕಲೆಕ್ಷನ್

ವಿಳಾಸಃ ಸಾಃ ಮನೆ ನಂ. 180, ಮಹಾಸತಿ ದೇವಸ್ಥಾನ ಹತ್ತಿರ , ಲಕ್ಷ್ಮೇಶ್ವರ, ತಾಃ ಅಂಕೋಲಾ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ**

ಪ್ರ 1: ನೀವು ಅಭಿಯೋಜನೆ ಪರ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ

ಪ್ರ 2: ಫ್ರಾಸಾ-1: ಸುಜೀತ ದೇವಿದಾಸ ಗಾಂವಕರ ಇವರು ತಮ್ಮ ಸಾಕ್ಷಿಯಲ್ಲಿ ದಿಃ12-04-2023 ರಂದು ರಾತ್ರಿ ಸುಮಾರು 8 ಗಂಟೆಯ ಸಮಯದಲ್ಲಿ ತನ್ನ 3 ತಿಂಗಳ ಗರ್ಭಿಣಿ ಹೆಂಡತಿಯನ್ನು ವಾಕಿಂಗ್ ಎಂದು ಆಲದ ಮರದ ಸ್ಟಾಪ್ ನಿಂದ ನಾಗರಕಟ್ಟೆಯ ದೇವಸ್ಥಾನದ ಕಡೆಗೆ ಪ್ರತಿದಿನ ಹೋಗುತ್ತಿದ್ದೇವು. ತಾವು ಆ ದಿನ ಎಡಬದಿಯಲ್ಲಿ ಕಚ್ಚಾ ರಸ್ತೆಯ ಮೇಲೆ ನಡೆದುಕೊಂಡು ಹೋಗುತ್ತಿದ್ದೇವು. ಆಗ ಬಾಲಚಂದ್ರ ನಾಯಕ ಇವರ ಮನೆಯ ಮುಂದೆ ಹಾಯ್ದು ಹೋಗುತ್ತಿರುವಾಗ ಆಟೋ ರಿಕ್ಷಾದ ಚಾಲಕನು ಬೆಲೆಕೇರಿಯಿಂದ ಅಂಕೋಲಾ ಕಡೆಗೆ ಅತಿ ವೇಗದಿಂದ ಮತ್ತು ನಿಷ್ಕಾಳಜಿತನದಿಂದ ವೇಗವನ್ನು ನಿಯಂತ್ರಣ ಮಾಡಲಾಗದೆ ಕಚ್ಚಾರಸ್ತೆಯಲ್ಲಿ ಹೋಗುತ್ತಿದ್ದ ತನ್ನ ಹೆಂಡತಿಗೆ ಬಂದು ಡಿಕ್ಕಿ ಹೊಡೆದಿರುತ್ತಾನೆ. ಡಿಕ್ಕಿ ಹೊಡೆದ ರಭಸಕ್ಕೆ ತನ್ನ ಹೆಂಡತಿ ಹಾರಿ ಬಿದ್ದಿರುತ್ತಾಳೆ. ಆಟೋ ಚಾಲಕನು ಪ್ರತಿದಿನ ತಮ್ಮ ಏರಿಯಾದಲ್ಲಿಯೇ ಓಡಾಡುತ್ತಿದ್ದ, ಆ ದಿನ ನಿಲ್ಲಿಸಲು ಹೇಳಿದರೂ ಸಹ ನಿಲ್ಲಿಸದೆ

ಹಾಗೆ ಚಲಾಯಿಸಿಕೊಂಡು ಹೋಗಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 3: ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷಿಯಲ್ಲಿ ನಂತರ ತನ್ನ ಹೆಂಡತಿಯನ್ನು ಎಬ್ಬಿಸಲು ನೋಡಿದಾಗ ಯಾವುದೇ ಚಲನವಲನ ಇರುವುದಿಲ್ಲ. ತನ್ನ ಹೆಂಡತಿಯ ತಲೆಯ ಹಿಂದೆ ಬಲಗಡೆ ರಕ್ತದ ಗಾಯವಾಗಿದ್ದು, ಮೂಗಿನಿಂದ ರಕ್ತ ಬರುತ್ತಿತ್ತು. ಮೈಕೈಗೆ ಸಣ್ಣಪುಟ್ಟ ಗಾಯವಾಗಿತ್ತು. ಅಲ್ಲಿ ಸೇರಿದ ಜನರ ಸಹಾಯದಿಂದ ಖಾಸಗಿ ವಾಹನದಲ್ಲಿ ಆರ್ಯಾ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಅಲ್ಲಿ ವೈದ್ಯರು ಪರೀಕ್ಷೆ ಮಾಡಿದಾಗ ಆಗಲೇ ಜೀವ ಹೋಗಿರುತ್ತದೆ ಎಂದು ಹೇಳಿರುತ್ತಾರೆ. ನಂತರ ಅಂಕೋಲಾ ಸರಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಹೋಗಿರುತ್ತೇವೆ. ಅದೇ ದಿನ ರಾತ್ರಿ 11 ಗಂಟೆಯ ಸಮಯದಲ್ಲಿ ಪೋಲೀಸ್ ಠಾಣೆಗೆ ಬಂದು ದೂರನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 4: ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷಿಯಲ್ಲಿ ಅದೇ ದಿನ ಶವಾಗಾರದಲ್ಲಿ ಪೊಟೋವನ್ನು ತೆಗೆದಿರುತ್ತಾರೆ. ನಂತರ ಮರುದಿನ ಪೋಸ್ಟ ಮಾಟಮ್ ಮುಗಿಸಿ ಬಂದು, ಶವವನ್ನು ತೆಗೆದುಕೊಂಡು ಹೋಗಿ ಬೆಳಿಗ್ಗೆ 9 ಗಂಟೆಯ ಒಳಗೆ ಎಲ್ಲ ಕ್ರಿಯೆಯನ್ನು ಮುಗಿಸಿರುತ್ತೇವೆ. ನಂತರ ಪೊಲೀಸರು ಇಬ್ಬರು ನಾಗರೀಕರನ್ನು ಕರೆದುಕೊಂಡು ಬಂದು ಅವರು ಈಗ ನೀವು ದುಃಖದಲ್ಲಿ ಇರುತ್ತೀರಿ ಎಂದು ಗೊತ್ತಿದ್ದು, ಆದರೂ ಸಹ ನೀವು ಸ್ಥಳವನ್ನು ತೋರಿಸಬೇಕು ಎಂದು ಹೇಳಿರುತ್ತಾರೆ. ಅದರಂತೆ ಬೆಳಿಗ್ಗೆ 11 ರಿಂದ 12.15 ಗಂಟೆಯವರೆಗೆ ತಾನು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಬರೆದು, ನಕಾಶೆಯನ್ನು ತಯಾರಿಸಿ, ತನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಪೊಟೋಗಳನ್ನು ತೆಗೆದಿರುತ್ತಾರೆ. ದಿಃ15-04-2023 ರಂದು ಆರೋಪಿಯನ್ನು ಗುರುತಿಸುವ ಸಲುವಾಗಿ ಪೊಲೀಸ್ ಠಾಣೆಗೆ ಬರಲು

ತಿಳಿಸಿದ್ದರು. ತಾನು 1 ನೇ ಆರೋಪಿಯಾದ ರವಿ ನಾಯಕ ಇವರನ್ನು ಗುರುತಿಸಿರುತ್ತೇನೆ. ಆತನನ್ನು ಗುರುತಿಸಲು ಹೋದಾಗ ಆತನ ಪೂರ್ಣ ಹೆಸರು ರವಿ ದಯಾನಂದ ನಾಯಕ ಎಂದು ಗೊತ್ತಾಗಿರುತ್ತದೆ. ಅದೇ ರೀತಿ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ. 1 ನೇ ಆರೋಪಿಯನ್ನು ಗುರುತಿಸುತ್ತೇನೆ ತಾನು ಆ ದಿನ 1 ನೇ ಆರೋಪಿಯು ಆಟೋವನ್ನು ಚಾಲನೆ ಮಾಡಿದ್ದನ್ನು ನೋಡಿರುತ್ತೇನೆ. ಆಟೋ ಸಂಖ್ಯೆ ಕೆ ಎ 30-ಎ 5087 ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 5: ಫ್ರಾಸಾ-2 ಸಮೃದ್ಧ ನಾರಾಯಣ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ ದಿಃ13-04-2023 ರಂದು ಚಾಸಾ-1 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಮತ್ತು ಚಾಸಾ-2 ರವರು ಹಾಜರಿದ್ದರು. ಅಪಘಾತದ ವಿಷಯವಾಗಿ ಪಂಚನಾಮೆಯನ್ನು ಜರುಗಿಸಲಾಯಿತು. ಬಾವಿಕೇರಿಯ ಬಾಲಚಂದ್ರ ನಾಯಕ ಇವರ ಮನೆಯ ಮುಂದೆ ಚಾಸಾ-1 ರವರ ಹೆಂಡತಿಯಾದ ಶೋಭಾ ಇವರಿಗೆ ಆಟೋ ರೀಕ್ಷಾ ಬಂದು ಡಿಕ್ಕಿ ಹೊಡೆದಿರುತ್ತದೆ ಎಂದು ಹೇಳಿರುತ್ತಾರೆ. ಚಾಸಾ-1 ರವರ ಹೆಂಡತಿಯು ಡಿಕ್ಕಿ ಹೊಡೆದ ರಭಸಕ್ಕೆ ಮೃತಪಟ್ಟಿರುತ್ತಾರೆ ಎಂದು ಚಾಸಾ-1 ರವರು ತಿಳಿಸಿದ ಸ್ಥಳದ ಪಂಚನಾಮೆಗೆಂದು ಹೋಗಿರುತ್ತೇನೆ. ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.15 ಗಂಟೆಯವರೆಗೆ ಜರುಗಿಸಲಾಯಿತು. ನಂತರ ನಕಾಶೆ ಹಾಗೂ ಪೊಟೋವನ್ನು ತೆಗೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 6: ಫ್ರಾಸಾ-3 ರಾಮಚಂದ್ರ ನಾರಾಯಣ ಗಾಂವಕರರವರು ತಮ್ಮ ಸಾಕ್ಷಿಯಲ್ಲಿ ದಿಃ15-04-2023 ರಂದು ಅಂಕೋಲಾದ ಪೊಲೀಸ್ ಠಾಣೆಗೆ ಪೊಲೀಸರು ಅಪಘಾತದ ವಿಷಯವಾಗಿ ಅಪಘಾತಪಡಿಸಿದ ಆಟೊ ರಿಕ್ಷಾದ ಪಂಚನಾಮೆಗೆಂದು

ಹೋಗಿರುತ್ತೇನೆ. ಅಲ್ಲಿ ಪೊಟೋಗಳನ್ನು ಕಲೆಕ್ಟ ಮಾಡಿಕೊಂಡು, ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಪೊಟೋಗಳನ್ನು ಹೊಡೆದುಕೊಂಡಿರುತ್ತಾರೆ. ಆಟೋ ರಿಕ್ಷಾದ ಸಂಖ್ಯೆ ಕೆಎ–30–5087 ಆಗಿರುತ್ತದೆ. ತಾನು ಪಂಚನಾಮೆಗೆ ಹೋದಾಗ ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಪಂಚನಾಮೆಗೆಂದು ಹೋದಾಗ ತಾನು, ಚಾಸಾ–5 ಮತ್ತು ಆಟೊ ಚಾಲಕ ಇದ್ದೇವು ಎಂದು ನುಡಿಯುತ್ತಾರೆ. ತಾನು ಅಂದು ನೋಡಿದ ಆಟೊ ಚಾಲಕನು ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ.7: ಫ್ರಾಸಾ–4 ಅಜೀತ ಗಣಪತಿ ನಾಯಕ ರವರು ತಮ್ಮ ಸಾಕ್ಷಿಯಲ್ಲಿ ದಿಃ12–04–2023 ರಂದು ಬಾವೀಕೇರಿಯ ಆಲದ ಮರದ ಹತ್ತಿರ ಒಂದು ರಿಕ್ಷಾ ಬಂದು ರಸ್ತೆಯ ಬದಿಗೆ ತನ್ನ ಗಂಡನ ಜೊತೆಗೆ ನಡೆದುಕೊಂಡು ಹೋಗುತ್ತಿದ್ದ ಗರ್ಭಿಣಿ ಹೆಂಗಸಿಗೆ ಹಿಂದಿನಿಂದ ಬಂದು ಡಿಕ್ಕಿ ಹೊಡೆದಿರುತ್ತದೆ. ತಾನು ಅವರ ಮುಂದುಗಡೆ ಹೋಗುತ್ತಿದ್ದು, ಶಬ್ದವಾಗಿದ್ದು, ಕೂಗಿದ್ದನ್ನು ಕೇಳಿಸಿಕೊಂಡು ಅವರ ಹತ್ತಿರ ಓಡಿ ಹೋಗಿರುತ್ತೇನೆ. ತಕ್ಷಣ ಅವರನ್ನು ವಾಹನದ ಮುಖಾಂತರ ಅಂಕೋಲಾದ ಆರ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಕೆಗೆ ತಲೆಯ ಹಿಂದುಗಡೆ ರಕ್ತ ಗಾಯವಾಗಿತ್ತು. ಆಕೆಗೆ ಪಜ್ಞೆ ಇರಲಿಲ್ಲ. ಮತ್ತೆ ಏನು ಆಗಿರುತ್ತದೆ ಎಂದು ಗೊತ್ತಾಗಿರುವುದಿಲ್ಲ. ಅಪಘಾತ ಮಾಡಿದವರು ರಿಕ್ಷಾ ಚಾಲಕ ಎಂದು ಗೊತ್ತಾಗಿರುತ್ತದೆ. ಅಲ್ಲಿ ಸೇರಿದ್ದ ಜನರು ಚಾಲಕನು ಕುಡಿದಿದ್ದನು ಎಂದು ಹೇಳಿದ್ದರು. ತಾನು ವಾಪಸ್ಸು ಬಂದು ನೋಡಿದ ನಂತರ ಸದರಿ ರಿಕ್ಷಾದ ಚಾಲಕನು ಸಾರಾಯಿ ಕುಡಿದಿದ್ದನು ಎಂದು ಹಾಗೂ ಓಡಿ ಹೋಗಿರುತ್ತಾನೆ ಎಂದು ಅಲ್ಲಿ ಸೇರಿದ್ದ ಜನರು ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 8: ಫ್ರಾಸಾ-5 ಉಮೇಶ ಬಿಕಾರಿಯಾ ನಾಯ್ಕ ರವರು ತಮ್ಮ ಸಾಕ್ಷಿಯಲ್ಲಿ ದಿಃ12-04-2023 ರಂದು ಬಾವೀಕೇರಿಯ ಆಲದ ಮರದ ಕಟ್ಟೆಯ ಹತ್ತಿರ ಒಂದು ಆಟೋ ರಿಕ್ಷಾ ಅಪಘಾತವಾಗಿರುತ್ತದೆ, ಆ ಸಮಯದಲ್ಲಿ ತಾನು ಇರಲಿಲ್ಲ. ಅಪಘಾತಕ್ಕೆ ಒಳಪಟ್ಟ ಹುಡುಗಿಯನ್ನು ಓಮ್ನಿ ವಾಹನದಲ್ಲಿ ಚಾಸಾ-9 ಮತ್ತು 11 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರು ಬಂದು ಎಲ್ಲರನ್ನು ವಿಚಾರಣೆ ಮಾಡಲಾಗಿ ತನ್ನ ಹೆಸರನ್ನೂ ಸಹ ತೆಗೆದುಕೊಂಡು ಹೋಗಿರುತ್ತಾರೆ. ಆಟೋ ರಿಕ್ಷಾ ಅಪಘಾತಪಡಿಸಿರುತ್ತದೆ. ಅದರ ಸಂಖ್ಯೆ ಕೆ ಎ 30 ಎ 5087 ಆಗಿರುತ್ತದೆ. ಒಬ್ಬರು ಆಟೋ ರಿಕ್ಷಾದ ಚಾಲಕನಾಗಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 9: ಫ್ರಾಸಾ-8 ಪ್ರೇಮನಗೌಡ ಗುರುಸಿದ್ದಪ್ಪ ಪಾಟೀಲ್, ಪಿ.ಎಸ್.ಐ ರವರು ತಮ್ಮ ಸಾಕ್ಷಿಯಲ್ಲಿ ದಿಃ12-04-2023 ರಂದು ರಾತ್ರಿ 11.00 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನಾ ನಂ.78/2023 ಕಲಂ 279, 304 ಎ ಐ.ಪಿ.ಸಿ ಹಾಗೂ 187 ಐ ಎಂ ವಿ ಕಾಯ್ದೆಯಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ರಾತ್ರಿ 11.30 ಗಂಟೆಗೆ ಚಾಸಾ-16 ರವರ ಮುಖಾಂತರ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿಃ13-04-2023 ರಂದು ಈ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ-21 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 10: ಫ್ರಾಸಾ-9 ಜಾಕ್ಸನ್ ಆರ್. ಡಿಸೋಜಾ, ಪೊಲೀಸ್ ಇನ್ಸಪೆಕ್ಟರ್ ರವರು ತಮ್ಮ ಸಾಕ್ಷಿಯಲ್ಲಿ ದಿಃ 13-04-2023 ರಂದು ಈ ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ.

ನಂತರ ಅದೇ ದಿನ ಬೆಳಿಗ್ಗೆ ಅಂಕೋಲಾದ ಸರಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ, ಅಲ್ಲಿ ಚಾಸಾ-6 ಮತ್ತು 7 ರವರ ಸಮಕ್ಷಮ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ನಂತರ ಚಾಸಾ-18 ರವರಿಗೆ ಶವಪರೀಕ್ಷೆಯನ್ನು ಮಾಡಲು ಚಾಸಾ-17 ರವರಿಂದ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ-1 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ 12.15 ಗಂಟೆಯತನಕ ಜರುಗಿಸಿರುತ್ತೇನೆ. ಹಾಗೂ ಕಚ್ಚಾ ನಕಾಶೆಯನ್ನು ತೆಗೆದಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಫೋಟೋವನ್ನು ತೆಗೆದಿರುತ್ತೇನೆ. ಅದೇ ದಿನ ಚಾಸಾ-8 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ15-04-2023 ರಂದು 1ನೇ ಆರೋಪಿಯು ತಾನಾಗಿಯೇ ಬೆಳಿಗ್ಗೆ 10.30 ಗಂಟೆಗೆ ಠಾಣೆಗೆ ಹಾಜರಾಗಿದ್ದು, ದಸ್ತಗಿರಿ ಮಾಡಿ, ದಸ್ತಗಿರಿ ನಿಯಮವನ್ನು ಪಾಲಿಸಿರುತ್ತೇನೆ. ಹಾಗೂ ಆರೋಪಿಯು ತನ್ನ ಜೊತೆಗೆ ಅಪಘಾತಪಡಿಸಿದ ಆಟೊ ರಿಕ್ಷಾವನ್ನು ತೆಗೆದುಕೊಂಡು ಬಂದಿದ್ದು, ಅದನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 10.45 ರಿಂದ 11.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ, ಫೋಟೋ ತೆಗೆದಿರುತ್ತೇನೆ. ನಂತರ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ನಂತರ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಹಾಗೂ ಚಾಸಾ-14, 16 ಮತ್ತು 17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-15 ರವರು 65ಬಿ ಪ್ರಮಾಣ ಪತ್ರವನ್ನು ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 11: ಫ್ರಾಸಾ–9 ರವರು ತಮ್ಮ ಮುಂದುವರೆದ ಸಾಕ್ಷಿಯಲ್ಲಿ ನಂತರ ದಿಃ15–04–2023 ರಂದು ಆರ್ ಟಿ ಓ ಇವರಿಗೆ ವಾಹನ ಪರೀಕ್ಷೆಯ ನಿವೇದನೆಯನ್ನು ನೀಡಿರುತ್ತೇನೆ. ದಿಃ18–04–2023 ರಂದು ಪಿ ಎಂ ವರದಿಯನ್ನು ಸರಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ದಿಃ 28–04–2023 ರಂದು ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಅಂಕೋಲಾಕ್ಕೆ ಪ್ರಥಮ ವರ್ತಮಾನ ವರದಿಯಲ್ಲಿ ಕಣ್ತಪ್ಪಿನಿಂದ ಫಿರ್ಯಾದಿಯ ಹೆಸರು ತಪ್ಪಾಗಿ ನಮೂದಾಗಿದ್ದರಿಂದ ಸರಿಪಡಿಸಿಕೊಳ್ಳಲು ನಿವೇದಿಸಿಕೊಂಡಿರುತ್ತೇನೆ. ದಿಃ02–06–2023 ರಂದು 133 ಎಂ ವಿ ಆಕ್ಟ ಅಡಿಯಲ್ಲಿ ನೋಟೀಸು ನೀಡಿದ್ದು, ವಾಹನದ ಮಾಲೀಕನಾದ 2 ನೇ ಆರೋಪಿಯು ಉತ್ತರವನ್ನು ನೀಡಿರುತ್ತಾನೆ. ನಂತರ ಇಂಡೆಮ್ನಿಟಿ ಬಾಂಡ್ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ಆ ಸಮಯದಲ್ಲಿ ವಾಹನದ ದಾಖಲಾತಿಗಳನ್ನು ನೀಡಿರುತ್ತಾರೆ. ನಂತರ ತನಗೆ ವರ್ಗಾವಣೆಯಾಗಿದ್ದರಿಂದ ಚಾಸಾ–22 ರವರಿಗೆ ಸದರಿ ಕಡತವನ್ನು ನೀಡಿರುತ್ತೇನೆ. ಆರೋಪಿತರನ್ನು ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 12: ಫ್ರಾಸಾ–10 ರವಿ ಬೀಸರಳ್ಳಿ ಬೀಮಸೇನ್ ರಾವ್ , ಹಿರಿಯ ಮೋಟಾರು ವಾಹನ ನಿರೀಕ್ಷಕರವರು ತಮ್ಮ ಸಾಕ್ಷಿಯಲ್ಲಿ ದಿಃ 15–04–2023 ರಂದು ಪಿಐ ಅಂಕೋಲಾ ಇವರಿಂದ ನಿವೇದನೆ ಬಂದಿದ್ದು, ಅದೇ ದಿನ ಸಂಜೆ 4.05 ಗಂಟೆಗೆ ಬಜಾಜ್ ಆಟೋ ರಿಕ್ಷಾ ನಂ. ಕೆ ಎ 30/ಎ 5087 ನೆದ್ದನ್ನು ಪರಿವೀಕ್ಷಣೆ ಮಾಡಿದಾಗ ಸದರಿ ವಾಹನಕ್ಕೆ ಯಾವುದೇ ಹಾನಿಯಾಗಿರುವುದು ಕಂಡುಬಂದಿರುವುದಿಲ್ಲ. ಯಾವುದೇ ತಾಂತ್ರಿಕ ತೊಂದರೆಯಿಂದ ಅಪಘಾತವಾಗಿರುವುದಿಲ್ಲ, ಒಂದು ಕಡೆ ಹಾನಿಯಾಗಿದ್ದು, ಅದರಂತೆ front shape dented towards right side. ಇದಕ್ಕೆ ಸಂಬಂಧಪಟ್ಟು ತಾನು

ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 13: ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೆ?

ಉತ್ತರಃ

ಪ್ರ 14: ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯೇ?

ಉತ್ತರಃ

( ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

ದಿನಾಂಕಃ18-09-2025

**(ಅರ್ಪಿತ ಬಿ ಬೆಲ್ಲದ)**

**ಪ್ರಭಾರ ಹೆ ಪ್ರ ದ ನ್ಯಾದಂ, ಅಂಕೋಲಾ.**

**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ.**

**ಸಿಸಿ ನಂಬರ 557/2023**

ಆರೋಪಿಯ ಹೆಸರುಃ 2) ದುರ್ಗಾ

ತಂದೆಯ ಹೆಸರುಃ ಮುಕುಂದ ನಾಯ್ಕ

ವಯಸ್ಸುಃ 42 ವರ್ಷ

ಉದ್ಯೋಗಃ ಆಟೋ ಚಾಲಕ

ವಿಳಾಸಃ ಸಾಃ ನಡುವಿನಕೇರಿ, ಹಾರವಾಡ,
ತಾಃ ಅಂಕೋಲಾ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ**

ಪ್ರ 1: ನೀವು ಅಭಿಯೋಜನೆ ಪರ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ

ಪ್ರ 2: ಫ್ರಾಸಾ-1: ಸುಜೀತ ದೇವಿದಾಸ ಗಾಂವಕರ ಇವರು ತಮ್ಮ ಸಾಕ್ಷಿಯಲ್ಲಿ ದಿಃ12-04-2023 ರಂದು ರಾತ್ರಿ ಸುಮಾರು 8 ಗಂಟೆಯ ಸಮಯದಲ್ಲಿ ತನ್ನ 3 ತಿಂಗಳ ಗರ್ಭಿಣಿ ಹೆಂಡತಿಯನ್ನು ವಾಕಿಂಗ್ ಎಂದು ಆಲದ ಮರದ ಸ್ಟಾಪ್ ನಿಂದ ನಾಗರಕಟ್ಟೆಯ ದೇವಸ್ಥಾನದ ಕಡೆಗೆ ಪ್ರತಿದಿನ ಹೋಗುತ್ತಿದ್ದೇವು. ತಾವು ಆ ದಿನ ಎಡಬದಿಯಲ್ಲಿ ಕಚ್ಚಾ ರಸ್ತೆಯ ಮೇಲೆ ನಡೆದುಕೊಂಡು ಹೋಗುತ್ತಿದ್ದೇವು. ಆಗ ಬಾಲಚಂದ್ರ ನಾಯಕ ಇವರ ಮನೆಯ ಮುಂದೆ ಹಾಯ್ದು ಹೋಗುತ್ತಿರುವಾಗ ಆಟೋ ರಿಕ್ಷಾದ ಚಾಲಕನು ಬೆಲೆಕೇರಿಯಿಂದ ಅಂಕೋಲಾ ಕಡೆಗೆ ಅತಿ ವೇಗದಿಂದ ಮತ್ತು ನಿಷ್ಕಾಳಜಿತನದಿಂದ ವೇಗವನ್ನು ನಿಯಂತ್ರಣ ಮಾಡಲಾಗದೆ ಕಚ್ಚಾ ರಸ್ತೆಯಲ್ಲಿ ಹೋಗುತ್ತಿದ್ದ ತನ್ನ ಹೆಂಡತಿಗೆ ಬಂದು ಡಿಕ್ಕಿ ಹೊಡೆದಿರುತ್ತಾನೆ. ಡಿಕ್ಕಿ ಹೊಡೆದ ರಭಸಕ್ಕೆ ತನ್ನ ಹೆಂಡತಿ ಹಾರಿ ಬಿದ್ದಿರುತ್ತಾಳೆ. ಆಟೋ ಚಾಲಕನು ಪ್ರತಿದಿನ ತಮ್ಮ ಏರಿಯಾದಲ್ಲಿಯೇ ಓಡಾಡುತ್ತಿದ್ದ, ಆ ದಿನ ನಿಲ್ಲಿಸಲು ಹೇಳಿದರೂ ಸಹ ನಿಲ್ಲಿಸದೆ

ಹಾಗೆ ಚಲಾಯಿಸಿಕೊಂಡು ಹೋಗಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 3: ಫ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷಿಯಲ್ಲಿ ನಂತರ ತನ್ನ ಹೆಂಡತಿಯನ್ನು ಎಬ್ಬಿಸಲು ನೋಡಿದಾಗ ಯಾವುದೇ ಚಲನವಲನ ಇರುವುದಿಲ್ಲ. ತನ್ನ ಹೆಂಡತಿಯ ತಲೆಯ ಹಿಂದೆ ಬಲಗಡೆ ರಕ್ತದ ಗಾಯವಾಗಿದ್ದು, ಮೂಗಿನಿಂದ ರಕ್ತ ಬರುತ್ತಿತ್ತು. ಮೈಕೈಗೆ ಸಣ್ಣಪುಟ್ಟ ಗಾಯವಾಗಿತ್ತು. ಅಲ್ಲಿ ಸೇರಿದ ಜನರ ಸಹಾಯದಿಂದ ಖಾಸಗಿ ವಾಹನದಲ್ಲಿ ಆರ್ಯಾ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಅಲ್ಲಿ ವೈದ್ಯರು ಪರೀಕ್ಷೆ ಮಾಡಿದಾಗ ಆಗಲೇ ಜೀವ ಹೋಗಿರುತ್ತದೆ ಎಂದು ಹೇಳಿರುತ್ತಾರೆ. ನಂತರ ಅಂಕೋಲಾ ಸರಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಹೋಗಿರುತ್ತೇವೆ. ಅದೇ ದಿನ ರಾತ್ರಿ 11 ಗಂಟೆಯ ಸಮಯದಲ್ಲಿ ಪೋಲೀಸ್ ಠಾಣೆಗೆ ಬಂದು ದೂರನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 4: ಫ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷಿಯಲ್ಲಿ ಅದೇ ದಿನ ಶವಾಗಾರದಲ್ಲಿ ಪೊಟೋವನ್ನು ತೆಗೆದಿರುತ್ತಾರೆ. ನಂತರ ಮರುದಿನ ಪೋಸ್ಟ ಮಾಟಮ್ ಮುಗಿಸಿ ಬಂದು, ಶವವನ್ನು ತೆಗೆದುಕೊಂಡು ಹೋಗಿ ಬೆಳಿಗ್ಗೆ 9 ಗಂಟೆಯ ಒಳಗೆ ಎಲ್ಲ ಕ್ರಿಯೆಯನ್ನು ಮುಗಿಸಿರುತ್ತೇವೆ. ನಂತರ ಪೊಲೀಸರು ಇಬ್ಬರು ನಾಗರೀಕರನ್ನು ಕರೆದುಕೊಂಡು ಬಂದು ಅವರು ಈಗ ನೀವು ದುಃಖದಲ್ಲಿ ಇರುತ್ತೀರಿ ಎಂದು ಗೊತ್ತಿದ್ದು, ಆದರೂ ಸಹ ನೀವು ಸ್ಥಳವನ್ನು ತೋರಿಸಬೇಕು ಎಂದು ಹೇಳಿರುತ್ತಾರೆ. ಅದರಂತೆ ಬೆಳಿಗ್ಗೆ 11 ರಿಂದ 12.15 ಗಂಟೆಯವರೆಗೆ ತಾನು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಬರೆದು, ನಕಾಶೆಯನ್ನು ತಯಾರಿಸಿ, ತನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಪೊಟೋಗಳನ್ನು ತೆಗೆದಿರುತ್ತಾರೆ. ದಿಃ15-04-2023 ರಂದು ಆರೋಪಿಯನ್ನು ಗುರುತಿಸುವ ಸಲುವಾಗಿ ಪೊಲೀಸ್ ಠಾಣೆಗೆ ಬರಲು

ತಿಳಿಸಿದ್ದರು. ತಾನು 1 ನೇ ಆರೋಪಿಯಾದ ರವಿ ನಾಯಕ ಇವರನ್ನು ಗುರುತಿಸಿರುತ್ತೇನೆ. ಆತನನ್ನು ಗುರುತಿಸಲು ಹೋದಾಗ ಆತನ ಪೂರ್ಣ ಹೆಸರು ರವಿ ದಯಾನಂದ ನಾಯಕ ಎಂದು ಗೊತ್ತಾಗಿರುತ್ತದೆ. ಅದೇ ರೀತಿ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ. 1 ನೇ ಆರೋಪಿಯನ್ನು ಗುರುತಿಸುತ್ತೇನೆ ತಾನು ಆ ದಿನ 1 ನೇ ಆರೋಪಿಯು ಆಟೋವನ್ನು ಚಾಲನೆ ಮಾಡಿದ್ದನ್ನು ನೋಡಿರುತ್ತೇನೆ. ಆಟೋ ಸಂಖ್ಯೆ ಕೆ ಎ 30–ಎ 5087 ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 5: ಫ್ರಾಸಾ–2 ಸಮೃದ್ಧ ನಾರಾಯಣ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ ದಿಃ13–04–2023 ರಂದು ಚಾಸಾ–1 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಮತ್ತು ಚಾಸಾ–2 ರವರು ಹಾಜರಿದ್ದರು. ಅಪಘಾತದ ವಿಷಯವಾಗಿ ಪಂಚನಾಮೆಯನ್ನು ಜರುಗಿಸಲಾಯಿತು. ಬಾವಿಕೇರಿಯ ಬಾಲಚಂದ್ರ ನಾಯಕ ಇವರ ಮನೆಯ ಮುಂದೆ ಚಾಸಾ–1 ರವರ ಹೆಂಡತಿಯಾದ ಶೋಭಾ ಇವರಿಗೆ ಆಟೋ ರೀಕ್ಷಾ ಬಂದು ಡಿಕ್ಕಿ ಹೊಡೆದಿರುತ್ತದೆ ಎಂದು ಹೇಳಿರುತ್ತಾರೆ. ಚಾಸಾ–1 ರವರ ಹೆಂಡತಿಯು ಡಿಕ್ಕಿ ಹೊಡೆದ ರಭಸಕ್ಕೆ ಮೃತಪಟ್ಟಿರುತ್ತಾರೆ ಎಂದು ಚಾಸಾ–1 ರವರು ತಿಳಿಸಿದ ಸ್ಥಳದ ಪಂಚನಾಮೆಗೆಂದು ಹೋಗಿರುತ್ತೇನೆ. ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.15 ಗಂಟೆಯವರೆಗೆ ಜರುಗಿಸಲಾಯಿತು. ನಂತರ ನಕಾಶೆ ಹಾಗೂ ಪೊಟೋವನ್ನು ತೆಗೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 6: ಫ್ರಾಸಾ–3 ರಾಮಚಂದ್ರ ನಾರಾಯಣ ಗಾಂವಕರರವರು ತಮ್ಮ ಸಾಕ್ಷಿಯಲ್ಲಿ ದಿಃ15–04–2023 ರಂದು ಅಂಕೋಲಾದ ಪೊಲೀಸ್ ಠಾಣೆಗೆ ಪೊಲೀಸರು ಅಪಘಾತದ ವಿಷಯವಾಗಿ ಅಪಘಾತಪಡಿಸಿದ ಆಟೊ ರಿಕ್ಷಾದ ಪಂಚನಾಮೆಗೆಂದು

ಹೋಗಿರುತ್ತೇನೆ. ಅಲ್ಲಿ ಫೋಟೋಗಳನ್ನು ಕಲೆಕ್ಟ ಮಾಡಿಕೊಂಡು, ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಫೋಟೋಗಳನ್ನು ಹೊಡೆದುಕೊಂಡಿರುತ್ತಾರೆ. ಆಟೋ ರಿಕ್ಷಾದ ಸಂಖ್ಯೆ ಕೆಎ–30–5087 ಆಗಿರುತ್ತದೆ. ತಾನು ಪಂಚನಾಮೆಗೆ ಹೋದಾಗ ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಪಂಚನಾಮೆಗೆಂದು ಹೋದಾಗ ತಾನು, ಚಾಸಾ–5 ಮತ್ತು ಆಟೊ ಚಾಲಕ ಇದ್ದೇವು ಎಂದು ನುಡಿಯುತ್ತಾರೆ. ತಾನು ಅಂದು ನೋಡಿದ ಆಟೊ ಚಾಲಕನು ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 7: ಫ್ರಾಸಾ–4 ಅಜೀತ ಗಣಪತಿ ನಾಯಕ ರವರು ತಮ್ಮ ಸಾಕ್ಷಿಯಲ್ಲಿ ದಿಃ12–04–2023 ರಂದು ಬಾವೀಕೇರಿಯ ಆಲದ ಮರದ ಹತ್ತಿರ ಒಂದು ರಿಕ್ಷಾ ಬಂದು ರಸ್ತೆಯ ಬದಿಗೆ ತನ್ನ ಗಂಡನ ಜೊತೆಗೆ ನಡೆದುಕೊಂಡು ಹೋಗುತ್ತಿದ್ದ ಗರ್ಭಿಣಿ ಹೆಂಗಸಿಗೆ ಹಿಂದಿನಿಂದ ಬಂದು ಡಿಕ್ಕಿ ಹೊಡೆದಿರುತ್ತದೆ. ತಾನು ಅವರ ಮುಂದುಗಡೆ ಹೋಗುತ್ತಿದ್ದು, ಶಬ್ದವಾಗಿದ್ದು, ಕೂಗಿದ್ದನ್ನು ಕೇಳಿಸಿಕೊಂಡು ಅವರ ಹತ್ತಿರ ಓಡಿ ಹೋಗಿರುತ್ತೇನೆ. ತಕ್ಷಣ ಅವರನ್ನು ವಾಹನದ ಮುಖಾಂತರ ಅಂಕೋಲಾದ ಆರ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಕೆಗೆ ತಲೆಯ ಹಿಂದುಗಡೆ ರಕ್ತ ಗಾಯವಾಗಿತ್ತು. ಆಕೆಗೆ ಪಜ್ಞೆ ಇರಲಿಲ್ಲ. ಮತ್ತೆ ಏನು ಆಗಿರುತ್ತದೆ ಎಂದು ಗೊತ್ತಾಗಿರುವುದಿಲ್ಲ. ಅಪಘಾತ ಮಾಡಿದವರು ರಿಕ್ಷಾ ಚಾಲಕ ಎಂದು ಗೊತ್ತಾಗಿರುತ್ತದೆ. ಅಲ್ಲಿ ಸೇರಿದ್ದ ಜನರು ಚಾಲಕನು ಕುಡಿದಿದ್ದನು ಎಂದು ಹೇಳಿದ್ದರು. ತಾನು ವಾಪಸ್ಸು ಬಂದು ನೋಡಿದ ನಂತರ ಸದರಿ ರಿಕ್ಷಾದ ಚಾಲಕನು ಸಾರಾಯಿ ಕುಡಿದಿದ್ದನು ಎಂದು ಹಾಗೂ ಓಡಿ ಹೋಗಿರುತ್ತಾನೆ ಎಂದು ಅಲ್ಲಿ ಸೇರಿದ್ದ ಜನರು ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 8: ಫ್ರಾಸಾ–5 ಉಮೇಶ ಬಿಕಾರಿಯಾ ನಾಯ್ಕು ರವರು ತಮ್ಮ ಸಾಕ್ಷಿಯಲ್ಲಿ ದಿಃ12–04–2023 ರಂದು ಬಾವೀಕೇರಿಯ ಆಲದ ಮರದ ಕಟ್ಟೆಯ ಹತ್ತಿರ ಒಂದು ಆಟೋ ರಿಕ್ಷಾ ಅಪಘಾತವಾಗಿರುತ್ತದೆ, ಆ ಸಮಯದಲ್ಲಿ ತಾನು ಇರಲಿಲ್ಲ. ಅಪಘಾತಕ್ಕೆ ಒಳಪಟ್ಟ ಹುಡುಗಿಯನ್ನು ಓಮ್ನಿ ವಾಹನದಲ್ಲಿ ಚಾಸಾ–9 ಮತ್ತು 11 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರು ಬಂದು ಎಲ್ಲರನ್ನು ವಿಚಾರಣೆ ಮಾಡಲಾಗಿ ತನ್ನ ಹೆಸರನ್ನೂ ಸಹ ತೆಗೆದುಕೊಂಡು ಹೋಗಿರುತ್ತಾರೆ. ಆಟೋ ರಿಕ್ಷಾ ಅಪಘಾತಪಡಿಸಿರುತ್ತದೆ. ಅದರ ಸಂಖ್ಯೆ ಕೆ ಎ 30 ಎ 5087 ಆಗಿರುತ್ತದೆ. ಒಬ್ಬರು ಆಟೋ ರಿಕ್ಷಾದ ಚಾಲಕನಾಗಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 9: ಫ್ರಾಸಾ–8 ಪ್ರೇಮನಗೌಡ ಗುರುಸಿದ್ದಪ್ಪ ಪಾಟೀಲ್, ಪಿ.ಎಸ್.ಐ ರವರು ತಮ್ಮ ಸಾಕ್ಷಿಯಲ್ಲಿ ದಿಃ12–04–2023 ರಂದು ರಾತ್ರಿ 11.00 ಗಂಟೆಗೆ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನಾ ನಂ.78/2023 ಕಲಂ 279, 304 ಎ ಐ.ಪಿ.ಸಿ ಹಾಗೂ 187 ಐ ಎಂ ವಿ ಕಾಯ್ದೆಯಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ರಾತ್ರಿ 11.30 ಗಂಟೆಗೆ ಚಾಸಾ–16 ರವರ ಮುಖಾಂತರ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿಃ13–04–2023 ರಂದು ಈ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ–21 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 10: ಫ್ರಾಸಾ–9 ಜಾಕ್ಸನ್ ಆರ್. ಡಿಸೋಜಾ, ಪೊಲೀಸ್ ಇನ್ಸಪೆಕ್ಟರ್ ರವರು ತಮ್ಮ ಸಾಕ್ಷಿಯಲ್ಲಿ ದಿಃ 13–04–2023 ರಂದು ಈ ಪ್ರಕರಣದ ಕಡತವನ್ನು ಚಾಸಾ–20 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ.

ನಂತರ ಅದೇ ದಿನ ಬೆಳಿಗ್ಗೆ ಅಂಕೋಲಾದ ಸರಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ, ಅಲ್ಲಿ ಚಾಸಾ–6 ಮತ್ತು 7 ರವರ ಸಮಕ್ಷಮ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ನಂತರ ಚಾಸಾ–18 ರವರಿಗೆ ಶವಪರೀಕ್ಷೆಯನ್ನು ಮಾಡಲು ಚಾಸಾ–17 ರವರಿಂದ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ–1 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಚಾಸಾ–2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ 12.15 ಗಂಟೆಯತನಕ ಜರುಗಿಸಿರುತ್ತೇನೆ. ಹಾಗೂ ಕಚ್ಚಾ ನಕಾಶೆಯನ್ನು ತೆಗೆದಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಫೋಟೋವನ್ನು ತೆಗೆದಿರುತ್ತೇನೆ. ಅದೇ ದಿನ ಚಾಸಾ–8 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ15–04–2023 ರಂದು 1ನೇ ಆರೋಪಿಯು ತಾನಾಗಿಯೇ ಬೆಳಿಗ್ಗೆ 10.30 ಗಂಟೆಗೆ ಠಾಣೆಗೆ ಹಾಜರಾಗಿದ್ದು, ದಸ್ತಗಿರಿ ಮಾಡಿ, ದಸ್ತಗಿರಿ ನಿಯಮವನ್ನು ಪಾಲಿಸಿರುತ್ತೇನೆ. ಹಾಗೂ ಆರೋಪಿಯು ತನ್ನ ಜೊತೆಗೆ ಅಪಘಾತಪಡಿಸಿದ ಆಟೋ ರಿಕ್ಷಾವನ್ನು ತೆಗೆದುಕೊಂಡು ಬಂದಿದ್ದು, ಅದನ್ನು ಚಾಸಾ–4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 10.45 ರಿಂದ 11.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ, ಫೋಟೋ ತೆಗೆದಿರುತ್ತೇನೆ. ನಂತರ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ನಂತರ ಚಾಸಾ–1 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಹಾಗೂ ಚಾಸಾ–14, 16 ಮತ್ತು 17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ–15 ರವರು 65ಬಿ ಪ್ರಮಾಣ ಪತ್ರವನ್ನು ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 11: ಫ್ರಾಸಾ–9 ರವರು ತಮ್ಮ ಮುಂದುವರೆದ ಸಾಕ್ಷಿಯಲ್ಲಿ ನಂತರ ದಿಃ15–04–2023 ರಂದು ಆರ್ ಟಿ ಓ ಇವರಿಗೆ ವಾಹನ ಪರೀಕ್ಷೆಯ ನಿವೇದನೆಯನ್ನು ನೀಡಿರುತ್ತೇನೆ. ದಿಃ18–04–2023 ರಂದು ಪಿ ಎಂ ವರದಿಯನ್ನು ಸರಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ದಿಃ 28–04–2023 ರಂದು ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಅಂಕೋಲಾಕ್ಕೆ ಪ್ರಥಮ ವರ್ತಮಾನ ವರದಿಯಲ್ಲಿ ಕಣ್ತಪ್ಪಿನಿಂದ ಫಿರ್ಯಾದಿಯ ಹೆಸರು ತಪ್ಪಾಗಿ ನಮೂದಾಗಿದ್ದರಿಂದ ಸರಿಪಡಿಸಿಕೊಳ್ಳಲು ನಿವೇದಿಸಿಕೊಂಡಿರುತ್ತೇನೆ. ದಿಃ02–06–2023 ರಂದು 133 ಎಂ ವಿ ಆಕ್ಟ ಅಡಿಯಲ್ಲಿ ನೋಟೀಸು ನೀಡಿದ್ದು, ವಾಹನದ ಮಾಲೀಕನಾದ 2 ನೇ ಆರೋಪಿಯು ಉತ್ತರವನ್ನು ನೀಡಿರುತ್ತಾನೆ. ನಂತರ ಇಂಡೆಮ್ನಿಟಿ ಬಾಂಡ್ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ಆ ಸಮಯದಲ್ಲಿ ವಾಹನದ ದಾಖಲಾತಿಗಳನ್ನು ನೀಡಿರುತ್ತಾರೆ. ನಂತರ ತನಗೆ ವರ್ಗಾವಣೆಯಾಗಿದ್ದರಿಂದ ಚಾಸಾ–22 ರವರಿಗೆ ಸದರಿ ಕಡತವನ್ನು ನೀಡಿರುತ್ತೇನೆ. ಆರೋಪಿತರನ್ನು ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 12: ಫ್ರಾಸಾ–10 ರವಿ ಬೀಸರಳ್ಳಿ ಬೀಮಸೇನ್ ರಾವ್ , ಹಿರಿಯ ಮೋಟಾರು ವಾಹನ ನಿರೀಕ್ಷಕರವರು ತಮ್ಮ ಸಾಕ್ಷಿಯಲ್ಲಿ ದಿಃ 15–04–2023 ರಂದು ಪಿಐ ಅಂಕೋಲಾ ಇವರಿಂದ ನಿವೇದನೆ ಬಂದಿದ್ದು, ಅದೇ ದಿನ ಸಂಜೆ 4.05 ಗಂಟೆಗೆ ಬಜಾಜ್ ಆಟೋ ರಿಕ್ಷಾ ನಂ. ಕೆ ಎ 30/ಎ 5087 ನೆದ್ದನ್ನು ಪರಿವೀಕ್ಷಣೆ ಮಾಡಿದಾಗ ಸದರಿ ವಾಹನಕ್ಕೆ ಯಾವುದೇ ಹಾನಿಯಾಗಿರುವುದು ಕಂಡುಬಂದಿರುವುದಿಲ್ಲ. ಯಾವುದೇ ತಾಂತ್ರಿಕ ತೊಂದರೆಯಿಂದ ಅಪಘಾತವಾಗಿರುವುದಿಲ್ಲ, ಒಂದು ಕಡೆ ಹಾನಿಯಾಗಿದ್ದು, ಅದರಂತೆ front shape dented towards right side. ಇದಕ್ಕೆ ಸಂಬಂಧಪಟ್ಟು ತಾನು

ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 13: ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೆ?

ಉತ್ತರಃ

ಪ್ರ 14: ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯೇ?

ಉತ್ತರಃ

( ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

ದಿನಾಂಕಃ18-09-2025

**(ಅರ್ಪಿತ ಬಿ ಬೆಲ್ಲದ)**

**ಪ್ರಭಾರ ಹೆ ಪ್ರ ದ ನ್ಯಾದಂ, ಅಂಕೋಲಾ.**